ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.2376/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಜುಬೇದಾ ಬೇಗಂ** | | |
| **ಗಂಡನ ಹೆಸರು** | **ಮೋಹಿನ್ ಪಟೇಲ್** | **ಪಿಡಬ್ಲೂಃ** | **5** |
| **ವಯಸ್ಸು** | **63 ವರ್ಷ** | **ಸಿಡಬ್ಲೂಃ** | **4** |
| **ಉದ್ಯೋಗಃ** | **ಗೃಹಿಣಿ** | | |
| **ವಾಸ ಸ್ಥಳಃ** | **ಸಿಂಧನೂರು.** | | |

**ದಿನಾಂಕ 02-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಈ ದಿನ ನ್ಯಾಯಾಲಯದಲ್ಲಿ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-1, 5 ನನ್ನ ಮಕ್ಕಳು, ಚಾಸಾ-6 ನನ್ನ ಮೈದುನ, ಚಾಸಾ-7 ನನ್ನ ಪರಿಚಯಸ್ಥರು, ಆರೋಪಿತರು ನನ್ನ ಸಂಬಂಧಿಕರು.

ಈಗ 3 ವರ್ಷಗಳ ಹಿಂದೆ ಬೆ.7-30 ರ ಸುಮಾರಿಗೆ ನಮ್ಮ ಮನೆಗೆ ಚಾಸಾ-1 ರವರು ನೀರು ಬಿಡಲು ಹೋದಾಗ, 1 & 2ನೇ ಆರೋಪಿತರು ಅಲ್ಲಿಗೆ ಹೋಗಿ ಆಸ್ತಿಯ ಸಲುವಾಗಿ, 1ನೇ ಆರೋಪಿ ನನ್ನ ಮಗನ ತೊಡೆಗೆ ಚೂರಿ ಹಾಕಿದ್ದರು. ನಂತರ ವಿಷಯ ತಿಳಿದು ನಾನು ಅಲ್ಲಿಗೆ ಹೋದೆ. ಆಗ ಆರೋಪಿತರು ನನ್ನ ಸೀರೆ ಹಿಡಿದು ಎಳೆದಾಡಿದರು. ಆಗ ಚಾಸಾ-5, 1 ರವರು ಬಂದು ಜಗಳ ಬಿಡಿಸಿಕೊಂಡಿದ್ದರು. ಪೋಲೀಸರು ನನ್ನನ್ನು ವಿಚಾರಣೆ ಮಾಡಿದ್ದರು, ನಾನು ಪೋಲೀಸರಿಗೆ ಜೀವದ ಬೆದರಿಕೆ ಇದೆ ಎಂದು ಹೇಳಿಕೆಯನ್ನು ಕೊಟ್ಟಿದ್ದೆ.

ಮು. ಮಾ. 1 ನ್ನು ನಾನು ನೋಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ನಿಮ್ಮ & ಆರೋಪಿತರ ನಡುವೆ ಆಸ್ತಿಯ ಸಲುವಾಗಿ ದ್ವೇಷವಿತ್ತು ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿ. ಆ ಬಗ್ಗೆ ಆಗಾಗ್ಗೆ ಜಗಳ ತೆಗೆಯುತ್ತಿದ್ದರು ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿ.

ದಿ. 17-5-2023 ರಂದು ಬೆ. 9-30 ಕ್ಕೆ ನೀವು ಮನೆಯ ಬಳಿ ಇದ್ದಾಗ, ಆರೋಪಿತರುನಮ್ಮ ಮನೆಯ ಹತ್ತಿರ ಬಂದು, ಚಾಸಾ-1 ರವರಿಗೆ ಹೊಡೆಬಡೆ ಮಾಡುವುದನ್ನು ನೋಡಿ ನೀವು ಬಿಡಿಸಿಕೊಳ್ಳಲು ಸ್ಥಳಕ್ಕೆ ಹೋದಿರಿ, ಆಗ 1 ನೇ ಆರೋಪಿ ನನ್ನ ಕೈಹಿಡಿದು ಎಳೆದಾಡಿ ಅವಮಾನ ಮಾಡಿದನು, 2 ನೇ ಆರೋಪಿ ನಿಮ್ಮ ಸೀರೆ, ಕೂದಲು ಹಿಡಿದು ಎಳೆದಾಡಿ ಹೊಡೆ ಬಡೆ ಮಾಡಿದ್ದರು ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿ. ನಂತರ ಚಾಸಾ-5 ರಿಂದ 7 ರವರು ಜಗಳ ಬಿಡಿಸಿದ್ದರು ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿ. ನಂತರ ಆರೋಪಿತರು ಹೋಗುವಾಗ ಇವತ್ತು ಉಳಿದುಕೊಂಡಿದ್ದೀರಿ, ಇನ್ನೊಮ್ಮೆ ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದರು ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿ. ನಂತರ ಚಾಸಾ-1 ರವರನ್ನು ನಾನು ವಿಚಾರಿಸಿದಾಗ ಅವರು ತಿಳಿಸಿದ್ದೇನೆಂದರೆ ಅದೇ ದಿನ ಬೆ.9-15 ಕ್ಕೆ ಆರೋಪಿತರು ಬಂದು ಆತನಿಗೆ ಲೇ ಸೂಳೆ ಮಗನೆ ನೀನು ಕೊಟ್ಟ ಕೇಸನ್ನು ವಾಪಾಸ್ ತೆಗೆದುಕೋ ಎಂದು ಜಗಳ ತೆಗೆದನು, ಆಗ ಚಾಸಾ-1 ರವರು ಹಿರಿಯರ ಸಮಕ್ಷಮ ಮಾತನಾಡಿ ಎಂದು ಹೇಳಿದಕ್ಕೆ, ಆತನಿಗೆ ಹೊಡೆ ಬಡೆ ಮಾಡಿದ್ದರು, 1 ನೇ ಆರೋಪಿ ಮು. ಮಾ. 1 ರಿಂದ ಚಾಸಾ-1 ತೊಡೆಗೆ ಚುಚ್ಚಿದನು, ನಂತರ ಜಗಳವನ್ನು ಚಾಸಾ-5 & 6 ರವರು ಬಿಡಿಸಿಕೊಂಡು ಸರ್ಕಾರಿ ಆಸ್ಪತ್ರೆಗೆ ಸೇರಿಸಿದ್ದರು ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿ.

ನೀವು ಆ ಚಾಕುವನ್ನು ನೋಡಿದ್ದೀರಿ, ಅದೇ ಮು. ಮಾ. 1 ಎಂದರೆ ಸರಿ. ಸದರಿ ವಿಷಯವಾಗಿ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿ.

**ಈಗ ಸಮಯ ಮಧ್ಯಾಹ್ನ 2 ಗಂಟೆ ಆಗಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನ 2-45 ಕ್ಕೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ಸಿಂಧನೂರು.

ದಿನಾಂಕ 02-07-2026 ರಂದು ಸಾಕ್ಷಿಯನ್ನು ಪುನಃ 3-36 ಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ

1. ಆರೋಪಿತರು ಹೈದ್ರಾಬಾದ್‌ನಲ್ಲಿ ವಾಸಿಸುತ್ತಾರೆ.

2. ಇದೇ ನ್ಯಾಯಾಲಯದಲ್ಲಿ ಹೊಲಮನೆ ಕೇಸ್ ನಡೆಯುತ್ತಿದೆ. ಸದರಿ ಹೊಲ ಖಾಸಿಂ ಪಟೇಲ್ ರವರ ಹೆಸರಿನಲ್ಲಿದೆ. ಖಾಸಿಂ ಪಟೇಲ್ ರವರು ನನ್ನ ಮಾವ. ಅವರಿಗೆ 5 ಜನ ಗಂಡು ಮಕ್ಕಳು, ಒಬ್ಬಳು ಹೆಣ್ಣು ಮಗಳು.

3. ನ್ಯಾಯಾಲಯದಲ್ಲಿ ಹೊಲ ಮನೆ ಕೇಸನ್ನು ಶಬಾನಾ ರವರು ಹಾಕಿರುತ್ತಾರೆ. ಅವರು ಭಾಗ ಬೇಕಂದು ಕೇಸ್ ಹಾಕಿರುತ್ತಾರಾ ಎಂದರೆ ಸಾಕ್ಷಿಯು ಶಬಾನಾ ಬೇಗಂ ರವರು ಭಾಗದ ಕೇಸ್ ಹಾಕಿ, ನಮಗೆ ಹೊಡೆ ಬಡೆ ಮಾಡಿರುತ್ತಾರೆ. ಅವರ ಮನೆ ನಮ್ಮ ಮನೆಯ ಪಕ್ಕದಲ್ಲಿದೆ.

4. ಈಗ ಸದರಿ ಹೊಲದ ಕಬ್ಜೆಯಲ್ಲಿ ಯಾರು ಇದ್ದಾರೆ ಎಂದರೆ ಸಾಕ್ಷಿಯು ಬದಲಿ ಜನ ಉಳುಮೆ ಮಾಡುತ್ತಿದ್ದಾರೆ ಎನ್ನುತ್ತಾರೆ. ಆ ಕೇಸಿನ ಸಂಬಂಧ ನೀವು ಈ ಕೇಸ್ ಮಾಡಿದ್ದೀರಿ ಎಂದರೆ ಸಾಕ್ಷಿಯು ಈ ಕೇಸ್ ಅಲ್ಲ ಎನ್ನುತ್ತಾರೆ. ಶಭಾನಾ ರವರು ಮಾಡಿದ ಆ ಕೇಸ್ & ಈ ಕೇಸ್ ಒಂದೆನಾ ಎಂದರೆ ಸಾಕ್ಷಿಯು ಎರಡೂ ಬೇರೆ ಬೇರೆ ಎನ್ನುತ್ತಾರೆ. ನನ್ನ ಮೇಲೆ, ನನ್ನ ಮೈದುನ, ಇಬ್ಬರು ಸಹೋದರರ ಮೇಲೆ, ನನ್ನ ತಂಗಿ & ಮಕ್ಕಳ ಮೇಲೆ ಕೇಸ್ ಮಾಡಿದ್ದಾರೆ. ಅವರುಗಳು ಈ ಪ್ರಕರಣದಲ್ಲಿ ಸಾಕ್ಷಿದಾರರಿದ್ದಾರೆ.

5. ನಮ್ಮ ಮನೆಯ ಹಿಂದುಗಡೆ ಹಿಂದೂ & ಮುಸ್ಲಿಂ ರವರ ಮನೆಗಳಿವೆ. ಜಗಳವಾದ ತಿಂಗಳು, ವರ್ಷ ಹೇಳಲು ಆಗುವುದಿಲ್ಲ. ಜಗಳವಾದ ಅರ್ಧ ಗಂಟೆಯ ನಂತರ ನಾನು ಸ್ಥಳಕ್ಕೆ ಬಂದಿದ್ದೆ. ಸದರಿ ಜಗಳದ ಬಗ್ಗೆ ನಿಮಗೆ ಗೊತ್ತಿಲ್ಲ ಎಂದರೆ ಸರಿ. ಆ ದಿನ ನಾನು ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆ. ನಾನು ಆಸ್ಪತ್ರೆಯಲ್ಲಿ ಒಂದೂವರೆ ದಿನ ಇದ್ದೆ. ನೀವು ಆಸ್ಪತ್ರೆಯಲ್ಲಿಯೇ ದಾಖಲಾಗಿದ್ದು, ಎಲ್ಲಿಯ ಹೋಗಿಲ್ಲ ಎಂದರೆ ಸರಿ. ನಾನು ಆಸ್ಪತ್ರೆಯಲ್ಲಿ ಇದ್ದಾಗ ಪೋಲೀಸರು ಬಂದು ನನ್ನನ್ನು

ಕೇಳಿದ್ದರು. ನಾನು ಆಸ್ಪತ್ರೆಯಲ್ಲಿ ದಾಖಲಿರಲಿಲ್ಲ, ನನ್ನ ಮಗ ದಾಖಲಾಗಿದ್ದನು. ನಾನು ಆ ದಿನ ಶಾಂತಿ ಆಸ್ಪತ್ರೆಯಲ್ಲಿ ದಾಖಲಾಗಿದ್ದೆನು.

6. ನಾನು ಆ ದಿನ ಏನೂ ನೋಡಿಲ್ಲ.

7. ನೀವು ಹೇಳಿದಂತೆ ಆರೋಪಿತರು ಆ ದಿನ ಬಂದಿಲ್ಲ, ಜಗಳ ಮಾಡಿಲ್ಲ, ಚಾಸಾ-1 ರವರಿಗೆ ಹೊಡೆದಿಲ್ಲ, ನಿಮ್ಮ ಸೀರೆ & ಕೂದಲು ಹಿಡಿದು ಎಳೆದಾಡಿ ಹೊಡೆದಿಲ್ಲ ಎಂದರೆ ಸರಿಯಲ್ಲ. ನಿಮ್ಮ & ಆರೋಪಿತರ ನಡುವೆ ಹೊಲದ ಕೇಸು ಇದ್ದು, ಅದನ್ನು ರಾಜಿ ಮಾಡಿಕೊಳ್ಳಲಿ ಎಂಬ ಉದ್ದೇಶದಿಂದ ಸುಳ್ಳು ಕೇಸನ್ನು ಮಾಡಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**